2. ಆ. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, ದಿನಾಂಕ 03.04.07 ರಂದು 24ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 110 ಪ್ರಶ್ನೆಗಳ ಪೈಕಿ 75 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ – 1)

ಅಧ್ಯಕ್ಷರು :– ಮಂಡಿಸಲಾಯಿತು. ಪ್ರಕಾಶ್‌ರವರೆ, ಅವರ helmet ವಿಚಾರ ಇರಲಿ, ನಿನ್ನೆ ಹಿಂದುಳಿದ ವರ್ಗಗಳ ವಿಚಾರದಲ್ಲಿ ಮಾತನಾಡಬೇಕು ಎಂದು ಹೇಳಿದ್ದರು, ಅದಕ್ಕೆ ನೀವು ಒಪ್ಪಿದ್ದಿರಿ. ಈಗ ಒಂದು ಗಂಟೆ ಮೇಲಾಯಿತು. ಈಗ 2.30 ಗಂಟೆಯವರೆಗೆ adjourn ಮಾಡಿ.

ಶ್ರೀ ಸಿದ್ಧರಾಮಯ್ಯ :– ಮಾನ್ಯ ಅಧ್ಯಕ್ಷರೆ, ಈಗ Question Hour ಮುಗಿದಿದೆ. ಇನ್ನೂ time ಇದೆ. ನಾನು ಪ್ರಸ್ತಾಪ ಮಾಡಿದಾಗ Question Hour ಆದತಕ್ಷಣ ಕೊಡುತ್ತೇನೆ ಎಂದಿರಿ.

ಅಧ್ಯಕ್ಷರು :– ಈಗ ದಯಮಾಡಿ ನನ್ನ ಮಾತನ್ನು ಕೇಳಿ. OBC ಬಗ್ಗೆ ಸಹ....

ಶ್ರೀ ಸಿದ್ಧರಾಮಯ್ಯ :– ಅದು ಆಯಿತಲ್ಲ, ಅದು ಆಮೇಲೆ ಮಾಡೋಣ.

ಅಧ್ಯಕ್ಷರು :– ಆಮೇಲೆ ನಿಮಗೆ ಸಂಬಂಧಪಟ್ಟಂತಹ ವಿಚಾರದ ಬಗ್ಗೆ ಕೂಡ ಒಳಗಡೆ ಚರ್ಚೆಯಾಗಬೇಕು ಎಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಕೆಲವರು ಸಲಹೆ ಕೊಟ್ಟಿದ್ದರು. ಆದುದರಿಂದ ನಾನು ಎಲ್ಲಾ ನಾಯಕರನ್ನು ನನ್ನ ಕೊಠಡಿಯಲ್ಲಿ ಕರೆಯುತ್ತೇನೆ. ಅದಾದಮೇಲೆ ನೀವು ಇಲ್ಲಿ ಪ್ರಸ್ತಾಪ ಮಾಡಬಹುದು. ಈಗ ಸದನವನ್ನು 2.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ತನ್ನ ಕಲಾಪವನ್ನು ಒಂದು ಗಂಟೆ 28 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತೆ 2.30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(4–00 ಗಂಟೆ)

(ಸದನವು ಮಧ್ಯಾಹ್ನ 4.00 ಗಂಟೆಗೆ ಪ್ರಾರಂಭವಾಯಿತು)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಆಸೀನರಾಗಿದ್ದರು)